ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ: Comp: 9 :03-04

ನೋಂದಣಿ ಮಹಾಪರಿವೀಕ್ಷಕರು ಹಾಗೂ
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಾವೇರಿ ಭವನ, ಜಲಮಂಡಳಿ ಕಟ್ಟಡ,
7ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು.
ದಿನಾಂಕ: 29-8-2003.

ಗಣಕೀಕರಣ

ಸುತ್ತೋಲೆ - 3

ವಿಷಯ:- ಕಾವೇರಿ ಸಾಫ್ಟ್‌ವೇರ್‌ದಲ್ಲಿ ದಸ್ತಾವೇಜುಗಳನ್ನು ನೋಂದಾಯಿಸುವ ಕುರಿತು.

---

ಕಾವೇರಿ ಸಾಫ್ಟ್‌ವೇರ್‌ದಲ್ಲಿ ದಸ್ತಾವೇಜುಗಳ ನೋಂದಣಿಯನ್ನು ಮಾಡಿ ಸಂಬಂಧಪಟ್ಟವರಿಗೆ 25 ನಿಮಿಷಗಳಲ್ಲಿ ಹಿಂತಿರುಗಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ.

ಈ ಕಾರ್ಯವನ್ನು ಜಾರಿಗೊಳಿಸುವಾಗ ಪ್ರಾರಂಭದಲ್ಲಿ ನಾನಾ ತರಹದ ಅಡೆತಡೆಗಳು ಬರಬಹುದು ಹಾಗೂ ಡಾಟಾ ಎಂಟ್ರಿ ಮಾಡುವಲ್ಲಿ ವಿಳಂಬವಾಗಬಹುದು. ಈ ಎಲ್ಲಾ ತೊಂದರೆಗಳನ್ನು ಉಪ ನೋಂದಣಾಧಿಕಾರಿಗಳು ಖುದ್ದಾಗಿ ಲಕ್ಷ್ಯವಹಿಸಿ ಕಂಪನಿಯವರೊಂದಿಗೆ ಸಂಯೋಜಿಸಿಕೊಂಡು ಪರಿಹರಿಸಿಕೊಳ್ಳತಕ್ಕದ್ದು.

ದಸ್ತಾವೇಜುಗಳನ್ನು ನೋಂದಣಿಗೆ ಸ್ವೀಕರಿಸುವ ಪೂರ್ವದಲ್ಲಿ ಮಧ್ಯಾಹ್ನ 3-30 ಗಂಟೆಯವರೆಗೆ ಮಾತ್ರ ತಪ್ಪದೆ ಟೋಕನ್‌ಗಳನ್ನು ಕೊಡತಕ್ಕದ್ದು. ಟೋಕನ್ ಪಡೆದ ಸಾರ್ವಜನಿಕರ ಎಲ್ಲಾ ನೋಂದಣಿ ಕಾರ್ಯವನ್ನು ಅಂದು ಸಾಯಂಕಾಲ 5-30 ಗಂಟೆಯೊಳಗೆ ಮುಗಿಸಲಾಗದಿದ್ದಲ್ಲಿ ಅಂದು ಟೋಕನ್ ಕೊಟ್ಟ ಎಲ್ಲಾ ದಸ್ತಾವೇಜುಗಳನ್ನು ಸಾಯಂಕಾಲ 5-30 ಗಂಟೆಯ ಮೇಲ್ಪಟ್ಟಾದರೂ ಅಂದಿನ ದಸ್ತಾವೇಜುಗಳನ್ನು ಅಂದೇ ನೋಂದಾಯಿಸಿ ಸಂಬಂಧಪಟ್ಟವರಿಗೆ ಹಿಂತಿರುಗಿಸತಕ್ಕದೆಂದು ಈ ಮೂಲಕ ನಿರ್ದೇಶಿಸಿದೆ.

ಈ ಆದೇಶವು ಗಣಕೀಕರಣದ ಕಾರ್ಯದಲ್ಲಿ ತೊಡಗಿದವರೆಲ್ಲರೂ ಪರಿಣತಿ ಸಾಧಿಸುವವರೆಗೆ ಮಾತ್ರ ಜಾರಿಯಲ್ಲಿರುತ್ತದೆ.

(ಡಿ.ಸತ್ಯಮೂರ್ತಿ, I.A.S.,)
ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

ಪ್ರತಿಯನ್ನು:-

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಯವರಿಗೆ.
2. ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿಯವರಿಗೆ
3. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ
4. ಗಾರ್ಡ್ ಫೈಲ್.
5. ಕಛೇರಿ ಕಡತಕ್ಕೆ.